**ಪ್ರಾಸಾ-20, ಡಾಃ ಬಸವರಾಜ ಕೋಟಿ ರವರನ್ನು ದಿನಾಂಕಃ 18.12.2025 ರಂದು ಪುನಃ VC ಮೂಲಕ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**(ಸಾಕ್ಷಿಯು ವಿಡಿಯೋ ಕಾನ್ಫರೆನ್ಸ ಮೂಲಕ ಸಾಕ್ಷ್ಯವನ್ನು ನುಡಿದಿರುತ್ತಾರೆ.)**

**ಕಲಬುರ್ಗಿಯ FSL ಕಚೇರಿಯಲ್ಲಿರುವ ಕ್ವಾಲಿಟಿ ಕಂಟ್ರೋಲ್ ಕಚೇರಿಯಲ್ಲಿರುವ ವಿಡಿಯೋ ಕಾನ್ಫರೆನ್ಸ ಕೊಠಡಿಯಲ್ಲಿ ಸಾಕ್ಷಿದಾರರು ಹಾಜರಿದ್ದಾರೆ. ಡಾಃ ಮಲ್ಲಿಕಾರ್ಜುನ, ಅಸಿಸ್ಟಂಟ ಡೈರೆಕ್ಟರ ಇವರನ್ನು ರಿಮೋಟ್ ಪಾಯಿಂಟ್ ಕೊ-ಆರ್ಡಿನೇಟರ್ ಎಂದು ನೇಮಿಸಲಾಯಿತು. ವಿಡಿಯೋ ಕಾನ್ಫರೆನ್ಸ ಮೂಲಕ ಸಾಕ್ಷಿಯನ್ನು ದಾಖಲು ಮಾಡಿಕೊಳ್ಳಲಾಗುತ್ತಿದೆ. ವಿಡಿಯೋ ಸಂಪರ್ಕವನ್ನು ಗೂಗಲ್ ಮೀಟ್http://meet.google.com/mff-voxg-qao ಮೂಲಕ ಕಲ್ಪಿಸಿಕೊಳ್ಳಲಾಗಿದೆ. ನೆಟ್ ವರ್ಕನಲ್ಲಿ ಯಾವುದೇ ತೊಂದರೆ ಇಲ್ಲ. ಆರೋಪಿ ನ್ಯಾಯಾಲಯದ ವಿ.ಸಿ. ಮೂಲಕ ಹಾಜರ ಇದ್ದು ಮತ್ತು ಆರೋಪಿ ಪರ ವಕೀಲರು ನ್ಯಾಯಾಲಯದಲ್ಲಿ ಹಾಜರ ಇರುತ್ತಾರೆ. ಆಡಿಯೋ ಮತ್ತು ವಿಡಿಯೋ ಸ್ಪಷ್ಟವಾಗಿದೆ.**



**ಪಾಟಿ ಸವಾಲುಃ ಶ್ರೀ ಎಸ್.ವಿ. ಗ್ರಾಮಪುರೋಹಿತ, ಆರೋಪಿ (CLADC) ಪರ ವಕೀಲರಿಂದಃ**

8. ನಿಪಿ-36 ರಲ್ಲಿ ಡ್ಯೂ ಡೇಟ್ 18.04.2022 ಎಂದು ನಮೂದಾಗಿದೆ ಎಂದರೆ ಸರಿ. ತದನಂತರ ನಾನು ದಿನಾಂಕವನ್ನು ವಿಸ್ತರಿಸಿ ಎಂದು ವಿನಂತಿ ಅರ್ಜಿಯನ್ನು ಕೊಟ್ಟಿರುವುದಿಲ್ಲ. ನಾನು ಸದರಿ ವಸ್ತುಗಳನ್ನು ಪರೀಕ್ಷೆ ಮಾಡಿದಾಗ, ಅವುಗಳು ಸುಸ್ಥಿತಿಯಲ್ಲಿ ಇದ್ದವು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

9. ದಿಃ 23.05.2022 ರಂದು ನಾನು ಸದರಿ ವಸ್ತುಗಳನ್ನು ವೈಜ್ಞಾನಿಕ ಪರೀಕ್ಷೆಗಾಗಿ ಪಡೆದುಕೊಂಡಿರುತ್ತೇನೆ. ದಿಃ 25.05.2022 ರಂದು ವೈಜ್ಞಾನಿಕ ಪರೀಕ್ಷೆಯನ್ನು ಮುಗಿಸಿರುತ್ತೇನೆ. ನನ್ನ ವರದಿಯಲ್ಲಿ ಯಾವ ಯಾವ ವಸ್ತುಗಳನ್ನು ಯಾವ ಯಾವ ದಿನಾಂಕದಂದು ವೈಜ್ಞಾನಿಕ ಪರೀಕ್ಷೆಗೆ ಒಳಪಡಿಸಿದ್ದೇನೆ ಎಂದು ನಮೂದು ಮಾಡಿರುವುದಿಲ್ಲ.

10. 2 ನೇ ವಸ್ತು - ಒಂದು ಬನಿಯನ ಕಟ್ ಆಗಿತ್ತು ಎಂದು ನನ್ನ ವರದಿಯಲ್ಲಿ ನಮೂದು ಮಾಡಿರುವುದಿಲ್ಲ. 3 ನೇ ವಸ್ತು - ಒಂದು ಅಂಡರವೇರ ಮೇಲೆ ಎಷ್ಟು ರಕ್ತದ ಕಲೆಗಳು ಇತ್ತು ಎಂದು ನನ್ನ ವರದಿಯಲ್ಲಿ ನಮೂದು ಮಾಡಿರುವುದಿಲ್ಲ. ಲುಂಗಿ ಮತ್ತು ಶರ್ಟನ ಮೇಲೆ ಎಷ್ಟು ರಕ್ತದ

ಕಲೆಗಳು ಇದ್ದವು ಎಂದು ನನ್ನ ವರದಿಯಲ್ಲಿ ನಮೂದು ಮಾಡಿರುವುದಿಲ್ಲ.

11. ನಾನು ಯಾವುದೇ ವಸ್ತುಗಳನ್ನು ವೈಜ್ಞಾನಿಕವಾಗಿ ಪರೀಕ್ಷೆ ಮಾಡದೇ ಇದ್ದರೂ ಕೂಡಾ, ಪೋಲೀಸರಿಗೆ ಅನುಕೂಲವಾಗಲಿ ಎಂದು ನಿಪಿ-37 ರ ಪ್ರಕಾರ ಸುಳ್ಳು ವರದಿಯನ್ನು ನೀಡಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ - ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ, ನನ್ನ ಉಕ್ತ ಲೇಖನದಂತೆ, ಸಾಕ್ಷಿಯ ಸಾಕ್ಷವನ್ನು ಬೆರಳಚ್ಚು ಮಾಡಿಸಲಾಯಿತು.)**

**ಓ ಹೇ ಕೇ ಸರಿ ಅದೆ.**

**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ಗದಗ**